


## ಹೀಯರ್ ಆಟೊ

ಕಾರಿನಲ್ಲಿ ಪಯಣಿಸುವಾಗ ಮಾರ್ಗ ಹುಡುಕಲು ಈ ಹುಡುಕಾಟದ ಅಪ್ಲಿಕೇಶನ್ ಸಹಕಾರಿ. ಕ್ಲೌಡ್ ಮೂಲಕ ಇದು ಕಾರು ಹಾಗೂ ಚಾಲಕನ ಮಧ್ಯೆ ಸಂಪರ್ಕ ಏರ್ಪಡಿಸುತ್ತದೆ. ಧ್ವನಿ ಮೂಲಕ ಚಾಲಕನಿಗೆ ನಿರ್ದೇಶನ ನೀಡುತ್ತದೆ. ಸಂಚಾರ ಒತ್ತಡ ಇರುವ ರಸ್ತೆಗಳು, ಪಾರ್ಕಿಂಗ್, ಕಾಫಿ ಶಾಪ್, ಉಪಾಹಾರಗೃಹಗಳ ಬಗ್ಗೆ ವಿವರ ನೀಡುತ್ತದೆ. ಮಾರ್ಗಗಳಿರುವ ಭೂಪಟವನ್ನೂ ಒದಗಿಸುತ್ತದೆ. ಸದ್ಯಕ್ಕೆ 95 ದೇಶಗಳಲ್ಲಿ ಬಿಡುಗಡೆ ಮಾಡಲಾಗಿದೆ.

## ಸ್ವಿಫ್ಟ್ ಕೀ

ಆ್ಯಂಡ್ರಾಯ್ಡ್‌ನ ಒಂದು ಅನುಕೂಲವೆಂದರೆ ಇದರಲ್ಲಿ ಡಿಫಾಲ್ಟ್ ಬ್ರೌಸರ್, ಕೀ ಹಾಗೂ ಸಂದೇಶದ ಅಪ್ಲಿಕೇಶನ್‌ಗಳನ್ನು ಬದಲಾಯಿಸಬಹುದು. ಗೂಗ್ಲ್ ಪ್ಲೇ ಸ್ಟೋರ್‌ನಲ್ಲಿರುವ ಸ್ವಿಫ್ಟ್‌ಕೀ ಅಪ್ಲಿಕೇಶನ್‌ಗೆ ಶುಲ್ಕ ಪಾವತಿಸಿದ ನಂತರ ಅಳವಡಿಸಿಕೊಳ್ಳಬಹುದು. 30 ದಿನಗಳ ಪ್ರಾಯೋಗಿಕ ಆಯ್ಕೆ ಕೂಡಾ ಇದೆ. ಮೊದಲು ಭಾಷೆ ಆಯ್ಕೆ ಮಾಡಿಕೊಳ್ಳಿ. 60 ಭಾಷೆಗಳು ಲಭ್ಯ. ಕೀ ಹೊಡೆದಾಗ ಕಂಪನ ಅಥವಾ ಧ್ವನಿ ಮೂಡಿಸಬಹುದು. ವೇಗವನ್ನು ಹೊಂದಿಸಬಹುದು. ಆ್ಯರೊ ಕೀಯಿಂದ ವಾಪಸ್ಸು ಒಂದು ಶಬ್ದವನ್ನು ಡಿಲೀಟ್ ಮಾಡಬಹುದು.







## ಮೈ ಡಿವೈಸ್

ನಿಮ್ಮ ಫೋನ್ ಅನ್ನು ಮೇಲ್ದರ್ಜೆಗೇರಿಸಬೇಕಾ? ಅಥವಾ ಹೊಸ ಟ್ಯಾಬ್ಲೆಟ್ ಅನ್ನು ಖರೀದಿಸಬೇಕಾ? ಗೂಗ್ಲ್ ಪ್ಲೇ ಸ್ಟೋರ್‌ನಲ್ಲಿ ಹಳೆಯ ಡಿವೈಸ್‌ಗಳು ಮತ್ತೆ ಮತ್ತೆ ಕಾಣದಂತೆ ಮಾಡಲು ಈ ಅಪ್ಲಿಕೇಶನ್ ನೆರವು ನೀಡುತ್ತದೆ. ನಿಮ್ಮ ಕಂಪ್ಯೂಟರ್ ಅಥವಾ ಸ್ಮಾರ್ಟ್ ಫೋನಿನ ವೆಬ್ ಬ್ರೌಸರ್‌ಗೆ ಹೋಗಿ ಸೆಟಿಂಗ್ ಆಪ್ಶನ್ ಆಯ್ಕೆ ಮಾಡಿ. ಇದು ಮೈ ಡಿವೈಸ್‌ಗೆ ಹೋಗುತ್ತದೆ. ಅಲ್ಲಿ ಗೂಗ್ಲ್ ಖಾತೆಯಲ್ಲಿ ನೀವು ನೋಂದಾಯಿಸಿದ ಎಲ್ಲಾ ಸ್ಮಾರ್ಟ್‌ಫೋನ್ ಮತ್ತು ಟ್ಯಾಬ್ಲೆಟ್ ವಿವರ ಕಾಣಿಸುತ್ತದೆ. ನಿಮ್ಮ ಖಾತೆಯಿಂದ ಡಿಲೀಟ್ ಮಾಡುವ ಡಿವೈಸ್ ಅನ್ನು ಆಯ್ಕೆ ಮಾಡಿ ಅಷ್ಟೆ. ನಿಮಗೆ ಬೇಡವಾದ ಡಿವೈಸ್ ಮತ್ತೆ ಮತ್ತೆ ಪ್ಲೇ ಸ್ಟೋರ್‌ನಲ್ಲಿ ಕಾಣಿಸಿಕೊಳ್ಳುವುದಕ್ಕೆ ಪೂರ್ಣ ವಿರಾಮ ಸಿಗುತ್ತದೆ.

## ಸ್ಯಾಮ್ಸಂಗ್ ವಾಚ್ ಫೋನ್

ಸ್ಮಾರ್ಟ್ ಫೋನ್ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮಾಡಿರುವ ಸ್ಯಾಮ್ಸಂಗ್ ಕಂಪೆನಿ ಇದೀಗ ಟಚ್ ಸ್ಕ್ರೀನ್ ಗ್ಯಾಲಕ್ಸಿ ಸ್ಮಾರ್ಟ್ ವಾಚ್ ಫೋನ್ ಬಿಡುಗಡೆ ಮಾಡಿದೆ. ಈ ಮೂಲಕ ನಮ್ಮ ದೇಹದ ಮೇಲಿರುವ ಆ್ಯಕ್ಸೆಸರಿಯೇ ಡಿವೈಸ್ ಆಗಿ ಅಂಕಿ–ಅಂಶ ಒದಗಿಸುವುದಲ್ಲದೇ ಹೊರ ಜಗತ್ತನ್ನು ಸಂಪರ್ಕಿಸುತ್ತದೆ.




■ ಎಸ್. ತುಂಬೆ